ಹೋಗಲಿ ಬಿಡಿ. ಹೀಗೆ ಹೇಳ್ತಾ ಹೋದ್ರೆ ಹೇಳುತ್ತಲೇ ಇರಬಹುದು. ಆದರೆ ಒಂದು ವಿಷಯ. ಹೋಟೆಲುಗಳ ಬಗ್ಗೆ ಪ್ರೀತಿ ಸಹಾನುಭೂತಿ ಬರವಣಿಗೆ ಇಟ್ಟುಕೊಂಡಿರುವವರಿಗೆಲ್ಲ ಪುರುಷರೇ. ಇತ್ತೀಚೆಗೆ ಆಹಾರ ತಜ್ಞರ ಉಪಟಳ(!) ನಮ್ಮಲ್ಲಿ ಜಾಸ್ತಿಯಾಗಿದೆ. ಅವರ ಅಂಕಣಗಳು ಇನ್ನೂ ಜಾಸ್ತಿಯಾಗಿವೆ. ಅವರೂ ಪುರುಷರೇ. ಎಲ್ಲೋ ಅಪರೂಪಕ್ಕೊಮ್ಮೆ ತೊಟ್ಟಿಲು ತೂಗುವ ಕೈ ಹಾಗೇ ಇರಬಾರದು ಅಂತ ಒಬ್ಬಿಬ್ಬರು ಹೆಣ್ಣು ಮಕ್ಕಳು ಇರಬಹುದು. ಇರಲಿ ಬಿಡಿ. ಮನೆಯ ಹೆಣ್ಣು ಮಕ್ಕಳು ತಾವೆಷ್ಟೇ ಹೋಟೆಲಿನ ಊಟ ತಿಂಡಿ ರುಚಿಗಳನ್ನು ಮೆಚ್ಚಿದರೂ ಅದು ತಮ್ಮ ಸಾಮ್ರಾಜ್ಯದ ಶತ್ರು ಎಂಬುದನ್ನು ಸದಾ ಮನದಲ್ಲಿಟ್ಟುಕೊಂಡು ಮನೆ ಅಡುಗೆ ಮುಂದೆ ಅದೇನು ಎಂದು ಹೌದೋ ಅಲ್ಲವೋ ಎಂಬಂತೆ ಕುಟುಕುತ್ತಿರುತ್ತಾರೆ. ಪಾಪ, ಅದು ಅವರ ಅಸ್ತಿತ್ವದ ಪ್ರಶ್ನೆ. ಮನೆತನದ ಮರ್ಯಾದೆಯನ್ನು ಕಾಪಾಡುವುದು ನಮ್ಮ ಧರ್ಮ ಎಂದೇ ಹೊಸಿಲು ಮೆಟ್ಟಿರುತ್ತಾರೆ. ಆದರೆ ಅವರಾರಿಗೂ ಬಗೆಹರಿಯದ ಪ್ರಶ್ನೆಯೊಂದು ಅವರೊಳಗೆ ಉಳಿದಿದೆ ಎಂದು ನನ್ನ ತಿಳಿವಳಿಕೆ. ಅದೆಂದರೆ ಏನು ಮಾಡಿದರೂ ಮನೆಯಲ್ಲಿ ಬರದ ರುಚಿಯೊಂದು ಘಮವೊಂದು ಅಲ್ಲಿ ಕಾಣಿಸುವುದಲ್ಲ, ಅದು ಹೇಗೆ? ಎಲ್ಲಿಂದ ಬರುತ್ತದೆ? ಪು.ತಿ.ನ.ರಂಥ ಮೇಲುಕೋಟೆಯ ಶುದ್ಧ ಮಡಿವಂತ ಸಂಪ್ರದಾಯಸ್ಥ ಕವಿಯೂ ಅದನ್ನು ಗಮನಿಸಿದ್ದಾರೆಂದ ಮೇಲೆ ವಿಷಯದ ಗಂಭೀರತೆ ದೊಡ್ಡದು. ಅದನ್ನು ಬೇಕೆಂತಲೇ ಮರೆಯುತ್ತ ಎಷ್ಟು ಬೇಕೋ ಅಷ್ಟನ್ನು ಆಗಾಗ ಆಹಾ... ಎಂದು ನೆಂಚಿಕೊಳ್ಳುತ್ತ ರುಚಿ ರುಚಿಯಾದ ದೋಸೆಯನ್ನೂ ಇದರಲ್ಲಿ ಏನೋ ಕಡಿಮೆಯಾಗಿದೆ, ಇಂಥ ದೋಸೆ ತಿಂದು ಜೀವನ ಮಾಡೋಕಾಗುತ್ಯೇ ಎಂದು ಪರಸ್ಪರರು ಅಂದುಕೊಳ್ಳುತ್ತ ಇನ್ನೊಂದು ಸುತ್ತು ಆರ್ಡರ್ ಮಾಡಿಕೊಳ್ಳುವುದು ಇದೆಯಲ್ಲಾ ಇದೆಲ್ಲಾ ದಾಂಪತ್ಯದ ಸ್ವಾರಸ್ಯ. ಆದರೆ ಮಕ್ಕಳಿಗೆ ಇದು ತಿಳಿಯುವುದಿಲ್ಲ. ಮನೆಯವರ ಮರ್ಯಾದೆಯನ್ನು ಸೂಕ್ತವಲ್ಲದ ಸಂದರ್ಭದಲ್ಲಿ, ಸೂಕ್ತವಲ್ಲದ ವ್ಯಕ್ತಿಗಳ ಮುಂದೆ ಸೂಕ್ತವಲ್ಲದ ರೀತಿಯಲ್ಲಿ ಕಳೆಯುವುದರಲ್ಲಿ ಅವರು ನಿಷ್ಣಾತರು. ನಾವು ಧಾರವಾಡದಲ್ಲಿದ್ದಾಗ ಆರು ವರ್ಷದ ಮಗನೊಂದಿಗೆ ಹೋಟೆಲೊಂದಕ್ಕೆ ಊಟಕ್ಕೆ ಹೋಗಿದ್ದೆವು. ಊಟವಾಯಿತು. ಮಗ ಬೇಕೆಂದಿದ್ದನ್ನೆಲ್ಲಾ ಐಸ್ ಕ್ರೀಂ ಸಮೇತ ಕೊಡಿಸಿ ನಮ್ಮ ಮುದ್ದು ತೋರಿಸಿದ್ದೆವು. ಇನ್ನು ಹೊರಡೋಣವೆಂದು ಕುರ್ಚಿಯಿಂದ ಎದ್ದೆವು. ತನ್ನ ಹೊಟ್ಟೆ ಸವರಿಕೊಳ್ಳುತ್ತ ಮಗ ದೊಡ್ಡದಾಗಿ ಸ್ಟೇಟ್‌ಮೆಂಟ್ ಒಂದನ್ನು ಎಲ್ಲರಿಗೂ ಕೇಳುವಂತೆ ಕೊಟ್ಟ 'ಅಬ್ಬಾ... ಊಟ ಅಂದರೆ ಹೀಗಿರಬೇಕು. ಅಲ್ವಾ ಅಮ್ಮ?' ಪತ್ನಿ ನನ್ನೆಡೆಗೆ ನೋಡಿದಳು. ನಾನು ನೋಡದಂತೆ ನಟಿಸಿ ಬಿಲ್ ಕಡೆಗೆ ನೋಡಿದೆ.

## ಜಿ.ಕೆ. ರವೀಂದ್ರಕುಮಾರ್

ಕವಿ, ವಿಮರ್ಶಕ ರವೀಂದ್ರಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯವರು. 'ಸಿಕಾಡ', 'ಪ್ಯಾಂಜಿಯಾ', 'ಕದವಿಲ್ಲದ ಊರಿನಲ್ಲಿ', 'ಒಂದು ನೂಲಿನ ಜಾಡು', 'ಮರವನಪ್ಪಿದ ಬಳ್ಳಿ' ಅವರ ಕವನ ಸಂಗ್ರಹಗಳು. ಭದ್ರಾವತಿ ಆಕಾಶವಾಣಿಯ ಕೇಂದ್ರದ ಸಹಾಯಕ ಕಾರ್ಯಕ್ರಮ ನಿರ್ದೇಶಕರಾಗಿರುವ ಅವರು 'ಸುಪ್ತಸ್ವರ', 'ಪುನರ್ಭವ' ಮುಂತಾದ ಗದ್ಯ ಕೃತಿಗಳನ್ನೂ ಪ್ರಕಟಿಸಿದ್ದಾರೆ.